ಈ) ವಿದ್ಯಾರ್ಥಿನಿಲಯಗಳ ವ್ಯವಸ್ಥೆಯನ್ನು ಉತ್ತಮ ಪಡಿಸಲು ವಸತಿ ನಿಲಯಗಳನ್ನು ತಪಾಸಣೆ ಮಾಡಿ, ಸಮಸ್ಯೆಗಳಿದ್ದಲ್ಲಿ ಪರಿಹರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆನೇಕಲ್ ತಾಲ್ಲೂಕಿನಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿರುವ ಬಗ್ಗೆ

4801 - ಶ್ರೀ ಸುಬ್ಬಾರೆಡ್ಡಿ ಕೆ.ಎನ್. (ಬಸವನಗುಡಿ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಜಿಲ್ಲೆ, ಆನೇಕಲ್ಲು ತಾಲ್ಲೂಕು, ಬನ್ನೇರುಘಟ್ಟ, ಶಿವನಹಳ್ಳಿ, ರಾಗಿಹಳ್ಳಿ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಪ್ರದೇಶಗಳಲ್ಲಿ ಅಕ್ರಮ ಗಣಿಗಾರಿಕೆ ನಿಲ್ಲಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ರಾಗಿಹಳ್ಳಿ ಮತ್ತು ಶಿವನಹಳ್ಳಿ ಗ್ರಾಮಗಳ ಸರಹದ್ದಿನಲ್ಲಿ ಅನಧಿಕೃತ ಗಣಿಗಾರಿಕೆಯನ್ನು ತಡೆ ಹಿಡಿಯಲಾಗಿ ಬನ್ನೇರುಘಟ್ಟ ಪೋಲೀಸ್ ಠಾಣೆಯಲ್ಲಿ 2 ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ. ಹಾಗೂ ದಂಡ ರೂಪದಲ್ಲಿ ರೂ. 11,200.00ಗಳನ್ನು ವಸೂಲು ಮಾಡಲಾಗಿದೆ.

ಕೋಲಾರ ನಗರದಲ್ಲಿ ಮನೆಗಳ ನಿರ್ಮಾಣ ಹಾಗೂ ಮೂಲಭೂತ ಸೌಲಭ್ಯಗಳು

4802 - ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ ಕೆ. (ಕೋಲಾರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ನಗರ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಾಣಗೊಂಡ ಮನೆಗಳೆಷ್ಟು?

ಆ) ನಿರ್ಮಾಣಗೊಂಡ ಮನೆಗಳ ನಿವಾಸಿಗಳಿಗೆ ಮೂಲಭೂತ ಸೌಕರ್ಯ ಒದಗಿಸಲಾಗಿದೆ?

ಇ) ಹಾಗಿದ್ದಲ್ಲಿ ಎಷ್ಟು ಮನೆಗಳಿಗೆ ಮೂಲಭೂತ ಸೌಕರ್ಯ ಒದಗಿಸಲಾಗಿದೆಯೇ?

ಈ) ಅನಧಿಕೃತ ಮನೆಗಳನ್ನು ಸಕ್ರಮಗೊಳಿಸಲು ಕ್ರಮ ಜರುಗಿಸಲಾಗಿದೆಯೆ?

ಉ) ಹಾಗಿದ್ದಲ್ಲಿ ಬರುವ ಆದಾಯವೆಷ್ಟು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) 4934

ಅ) ಹೌದು.

ಇ) ಅನಧಿಕೃತವಾಗಿ ನಿರ್ಮಾಣಗೊಂಡ ಎಲ್ಲ ಮನೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.

ಈ) ನಗರ ಸಭೆಯ ಸಾಮಾನ್ಯ ಅಧೀವೇಶನದ ಠರಾರವನ್ನು ಸರ್ಕಾರದಿಂದ ಪರಿಶೀಲಿಸಲಾಗುತ್ತಿದೆ.

ಉ) ಸುಮಾರು 2.61 ಕೋಟಿ ರೂ.ಗಳ ಆದಾಯ ನಿರೀಕ್ಷೆ ಮಾಡಲಾಗಿದೆ.

ಕಾವೇರಿ ನದಿ ಮೂಲದಿಂದ ಕುಡಿಯುವ ನೀರಿನ ಸರಬರಾಜು

4803 - ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ ಕೆ (ಕೋಲಾರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕಾವೇರಿ ನದಿ ಮೂಲದಿಂದ ಆನೇಕಲ್, ಮಾಲೂರು, ಹೊಸಕೋಟೆ, ಬಂಗಾರಪೇಟೆ ಕೋಲಾರ ನಗರಗಳಿಗೆ ಹಾಗೂ ಇನ್ನಿತರ 133 ಹಳ್ಳಿಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಯೋಜನೆ ತಯಾರಿಸಲಾಗಿದೆಯೆ?

2) ಹಾಗಿದ್ದಲ್ಲಿ, ಅಂದಾಜು ವೆಚ್ಚವೆಷ್ಟು?

3) ಈಗ ಯಾವ ಹಂತದಲ್ಲಿದೆ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

1) ಸಾಧ್ಯತಾ ವರದಿಯನ್ನು ತಯಾರಿಸಲಾಗಿದೆ.

2) ಯೋಜನೆಯ ಅಂದಾಜು ರೂ. 670.70 ಕೋಟಿ.

3) ಈ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಜಾತಿ ಪ್ರಮಾಣ ಪತ್ರ ನೀಡುವಲ್ಲಿ ತಾರತಮ್ಯ

4804 - ಶ್ರೀ ಸುಭಾಷ್ ಕಲ್ಲೂರ್ (ಹುಮನಾಬಾದ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆ ಹುಮ್ನಾಬಾದ್ ತಾಲ್ಲೂಕು ಈ ವ್ಯಾಪ್ತಿಯಲ್ಲಿ ಜಾತಿ ಪ್ರಮಾಣ ಪತ್ರವನ್ನು ನೀಡಲು ಅನುಸರಿಸುತ್ತಿರುವ ಮಾನದಂಡಗಳೇನು?

ಆ) ಮೀಸಲಾತಿ ಅನ್ವಯ ಇರುವ ಜಾತಿ, ಉಪ ಜಾತಿ ಪಂಗಡಗಳಾವುವು? (ಈ ಕ್ಷೇತ್ರಕ್ಕೆ ಒಳಗೊಂಡಂತೆ ಮಾಹಿತಿ ನೀಡುವುದು)